# ಪರಕಾಯ ಪ್ರವೇಶ

'ಪರಕಾಯ' ಎಂದರೆ, ಬೇರೊಬ್ಬರ ದೇಹ ಎಂದು ಅರ್ಥ. ಅಂಥವರ ದೇಹವನ್ನು ಪ್ರವೇಶಿಸುವುದನ್ನು 'ಪರಕಾಯ ಪ್ರವೇಶ' ಎಂದು ಕರೆಯುತ್ತಾರೆ. ಜೀವಂತವಿರುವ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿ ಪ್ರವೇಶಿಸುವುದು 'ಪರಕಾಯ ಪ್ರವೇಶ'ದ ವ್ಯಾಪ್ತಿಗೆ ಬರುವುದಿಲ್ಲ. ಸತ್ತಿರುವ ಯಾವುದಾದರೊಂದು ಕಾಯವನ್ನು ಪ್ರವೇಶಿಸುವುದಕ್ಕೆ 'ಪರಕಾಯ ಪ್ರವೇಶ' ಎಂದು ತಿಳಿಯಬೇಕು. ಆಚಾರ್ಯ ಶಂಕರ ಭಗವತ್ಪಾದರ ಕುರಿತಿರುವ 'ಶ್ರೀಮದ್‌ಶಂಕರದಿಗ್ವಿಜಯ'ದಲ್ಲಿ ಶಂಕರಾಚಾರ್ಯರು ಗೃಹಸ್ಥನೊಬ್ಬನ ದೇಹವನ್ನು ಪ್ರವೇಶಿಸುವ ವಿವರಣೆ ಬರುತ್ತದೆ. ಇದು ಹೇಗೆ ಸಾಧ್ಯ? ಎಂದು ಆಧುನಿಕ ಜೀವಶಾಸ್ತ್ರದ ವಿಜ್ಞಾನಿಗಳು ಪ್ರಶ್ನಿಸಬಹುದು. ಇದೊಂದು 'ಜಾದು' ಎಂದು ಹೇಳಿಬಿಡಬಹುದು. ಆದರೆ, 'ಯೋಗವಿಜ್ಞಾನ'ದ ಹಿನ್ನೆಲೆಯಲ್ಲಿ ನೋಡಿದರೆ ಇದು ಸಾಧ್ಯ ಎಂಬುದಕ್ಕೆ ಹಲವು ಜೀವಂತ ಉದಾಹರಣೆಗಳು ನಮಗೆ ಸಿಗುತ್ತವೆ. ನಮ್ಮ ಕಾಲದಲ್ಲಿ ನಡೆದ ಅಂಥ ಒಂದು ಉದಾಹರಣೆಯನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ಇದು ನಡೆದದ್ದು ಅರುವತ್ತು ವರ್ಷಗಳ ಹಿಂದೆ. ಈ ಘಟನೆಯು ಉತ್ತರ ಭಾರತದ ಖಾನ್‌ಪುರದ ಕಂಟೋನ್ಮೆಂಟ್ ಸಮೀಪದ 'ಗಂಗಾಕುಟಿ'ಯ ಎದುರಿದ್ದ ಮಳಲಿನಲ್ಲಿ ನಡೆಯಿತು. ಅಲ್ಲಿ ದಂಡೀಸ್ವಾಮಿ ಎಂಬುವರು 14 ಮೇ 1969ರ ಭಾನುವಾರ ಬೆಳಗಿನ ಜಾವ ಐದು ಗಂಟೆಗೆ ಪ್ರದರ್ಶಿಸಿದರು. ಖಾನ್‌ಪುರದ ಗೃಹಸ್ಥರಾದ ಅಮರನಾಥ ಕೆಡಿಯಾ ಎಂಬುವರು ತಮ್ಮ ಸ್ನೇಹಿತರಿಗೆ ಪತ್ರ ಬರೆದು ಈ ವಿಷಯವನ್ನು ತಿಳಿಸಿದರು. ಇವರ ಆಮಂತ್ರಣದ ಮೇರೆಗೆ ಆ ದಿನ ಖಾನ್‌ಪುರದ ವಕೀಲರಾದ ಬಾಬೂಲಾಲ ಮಿಶ್ರ, ಆಯುರ್ವೇದಾಚಾರ್ಯ ಬದ್ರಿವಿಶಾಲ ತ್ರಿಪಾಠಿ, ದೇವಿಪ್ರಸಾದ ನೇವಟಿಯಾ, ಡಾ. ಓಂಕಾರನಾಥ ಭಾರ್ಗವ, ಶಿವನಾರಾಯಣ ಕಪೂರ, ಇವರ ಜತೆಗೆ ನಾಲ್ವರು ವೈದ್ಯರೂ ಬಂದಿದ್ದರು. ನಿವೃತ್ತ ಸಿವಿಲ್ ಸರ್ಜನ್‌ರಾದ ಡಾ. ದೀಕ್ಷಿತ, ಡಾ. ಆರ್. ಪ್ರಸಾದ, ಡಾ. ಭಾಟ್‌ನಗರ ಮೊದಲಾದವರೂ ಇದ್ದರು. ಇವರೆಲ್ಲರ ಸಮ್ಮುಖದಲ್ಲಿ ದಂಡೀಸ್ವಾಮಿಗಳು ತಮ್ಮ ಪರಕಾಯ ಪ್ರವೇಶವನ್ನು ಪ್ರದರ್ಶಿಸಿದರು. ಅನಂತರ ಬಂದಿದ್ದ ಸಮಸ್ತರೂ ಸೇರಿ ಸಂಯುಕ್ತ ಪ್ರಕಟಣೆಯನ್ನು ಹೊರಡಿಸಿದರು.

ಶ್ರೀಕೆಡಿಯಾ ಅವರು ಒಬ್ಬ ಜಿಜ್ಞಾಸು. ಅವರು ಪ್ರದರ್ಶನಕ್ಕೆ ಬಂದಿದ್ದ ಸ್ನೇಹಿತರಿಗೆ ಈ ಸ್ವಾಮಿಗಳ ಪರಕಾಯ ಪ್ರವೇಶದ ಯೋಗಶಕ್ತಿಯ ಪ್ರದರ್ಶನವನ್ನು ಚೆನ್ನಾಗಿ ಪರಿಶೀಲಿಸಬೇಕೆಂದು ಕೋರಿಕೊಂಡರು. ಅದರಂತೆ ಅವರೆಲ್ಲರೂ ಸುತ್ತಮುತ್ತಣ ಪ್ರದೇಶವನ್ನು ಪರಿಶೀಲಿಸಿದರು. ದಂಡೀಸ್ವಾಮಿಗಳು ಮಳಲದಂಡೆಯ ಮೇಲೆ ಪೂಜೆ ಮಾಡುತ್ತಿದ್ದರು. ಅವರು ಕುಳಿತಿದ್ದ ಜಾಗಕ್ಕೆ ಒಂದೆರಡು ಬಿದಿರು, ಒಂದು ಬಟ್ಟೆಯ ತುಂಡು ಮತ್ತು ಬಟ್ಟೆಯಲ್ಲಿ ಸುತ್ತಿದ್ದ ಅಸ್ಥಿಪಂಜರವನ್ನು ಪರಿವಾರದ ಜನ ತಂದಿರಿಸಿದರು. ಅನಂತರ ಸ್ವಾಮಿಗಳು: 'ಈ ಜಾಗವನ್ನು ಚೆನ್ನಾಗಿ ಪರಿಶೀಲಿಸಿರಿ. ಈ ವಸ್ತುಗಳನ್ನು ಸರಿಯಾಗಿ ಗಮನಿಸಿರಿ. ಏಕೆಂದರೆ, ನಿಮ್ಮ ತಲೆಯ ತುಂಬಾ ಸಂಶಯಗಳೇ ತುಂಬಿರುತ್ತವೆ. ಪ್ರದರ್ಶನ ಮಾಡಿದ ನಂತರ ನಾನು ಸರಿಯಾಗಿ ನೋಡಬೇಕಿತ್ತು, ನಾನು ಅದನ್ನು ನೋಡಲಿಲ್ಲ. ಹೀಗೆಂದು ಹೇಳುತ್ತ ಮರುಗಬೇಡಿರಿ' ಎಂದು ಹೇಳಿದರು. ಸ್ವಾಮಿಗಳು ಎಲ್ಲರನ್ನು ನೋಡುತ್ತಿದ್ದರು. ಜನ ನೆಲವನ್ನು ಪರಿಶೀಲಿಸಿದರು. ವೈದ್ಯರು ಬಟ್ಟೆ ಹಾಗೂ ಅಸ್ಥಿಪಂಜರವನ್ನು ಪರಿಶೀಲಿಸಿದರು. ಅನಂತರ ಅವೆಲ್ಲದರ ಛಾಯಾಚಿತ್ರಗಳನ್ನು ತೆಗೆಯಲಾಯಿತು. ಅನಂತರ ಕಂಬಕ್ಕೆ ಬಟ್ಟೆ ಸುತ್ತಿ ಅಸ್ಥಿಯನ್ನು ಮರೆಮಾಡಿದರು. ದಂಡೀಸ್ವಾಮಿಗಳು ಮತ್ತೆ ವೈದ್ಯರನ್ನು ಕೂಗಿ ಮತ್ತೊಮ್ಮೆ ಪರಿಶೀಲಿಸುವಂತೆ ಕೋರಿದರು. ಡಾ. ಆರ್. ಪ್ರಸಾದ್, ಡಾ. ಭಾರ್ಗವ, ಡಾ. ದೀಕ್ಷಿತ್, ಡಾ. ಭಾಟ್‌ನಗರ ಇವರು ಕಂಬದ ಮರೆಗೆ ಹೋಗಿ ಕಣ್ಣಲ್ಲಿ ಕಣ್ಣಿಟ್ಟು ಪರಿಶೀಲಿಸಿದರು. ಪೂರ್ತಿ ಶೋಧಿಸಿದ ನಂತರ ಸಮಾಧಾನಪಟ್ಟುಕೊಂಡರು. ಅನಂತರ ಸ್ವಾಮೀಜಿಯವರು ಬಟ್ಟೆ ತುಂಡು ತರಿಸಿ ಅಸ್ಥಿಪಂಜರಕ್ಕೆ ಹೊದಿಸಿದರು. ಮರಳಿ ವೈದ್ಯರು ಇನ್ನೊಮ್ಮೆ ಪರಿಶೀಲಿಸಿದರು.

ದಂಡೀಸ್ವಾಮಿಗಳು ಕುಳಿತುಕೊಂಡು ತಮ್ಮ ಕಲಾಪಗಳಲ್ಲಿ ತೊಡಗಿದರು. ವೈದ್ಯರ ಗುಂಪು ಹೊರಗಡೆಯಿಂದ ಎಲ್ಲವನ್ನು ನೋಡುತ್ತಿದ್ದರು. ಐದೇ ಐದು ನಿಮಿಷವಾಗಿರಬೇಕು. ಸ್ವಾಮಿ ಹೊರಗೆ ಬಂದು ಅಸ್ಥಿಪಂಜರದ ಸುತ್ತ ಕಟ್ಟಿದ ಬಟ್ಟೆಯನ್ನು ಸಂಕ್ಷೇಪಿಸಿದರು. ಸ್ವಾಮಿಗಳು ಹೊರಗಿನಿಂದಲೇ ಕೆಲವು ವಿಧಿಗಳನ್ನು ನೆರವೇರಿಸಿದರು. ಅನಂತರ ತಮ್ಮ ಪರಿವಾರಕ್ಕೆ ಬಟ್ಟೆ ಮೇಲೆತ್ತಲು ಹೇಳಿದರು. ತಟ್ಟೆಯಲ್ಲಿದ್ದ ಅಕ್ಷತೆಗಳನ್ನು ಅಸ್ಥಿಪಂಜರದ ಮೇಲೆ ಎಸೆಯುತ್ತಿದ್ದರು. ಅವರು ಮೂರು ಬಾರಿ ಅಕ್ಷತೆಯನ್ನು ಎಸೆದರು. ಮೊದಲ ಬಾರಿ ಎಸೆದಾಗ ಬಟ್ಟೆ ಸ್ವಲ್ಪ ಬಿಗಿಯಾಯಿತು. ಎರಡನೆಯ ಬಾರಿಗೆ ಒಳಗೆ ಅಲುಗಿದ ಹಾಗಾಯಿತು. ಮೂರನೆಯ ಬಾರಿಗೆ ಅಸ್ಥಿಪಂಜರದ ಸ್ಥಳದಲ್ಲಿ ಒಬ್ಬ ಮನುಷ್ಯ ಎದ್ದು ಕುಳಿತ. ಅಲ್ಲಿ ನೆರೆದಿದ್ದ ನೂರಾರು ಜನ ಚಪ್ಪಾಳೆ ತಟ್ಟಿ ಜಯಕಾರ ಮಾಡಿದರು. ಸ್ವಾಮಿಗಳು ವೈದ್ಯರು ಬಂದು ಪರೀಕ್ಷಿಸುವಂತೆ ಬಿನ್ನವಿಸಿಕೊಂಡರು. ಡಾ. ದೀಕ್ಷಿತರು ಬಂದು ವೈದ್ಯಕೀಯ ದೃಷ್ಟಿಯಿಂದ ಪರೀಕ್ಷಿಸಿ ಮೂಕವಿಸ್ಮಿತರಾದರು. ಆತ ಸಾಮಾನ್ಯ ಆರೋಗ್ಯವಂತ ಮನುಷ್ಯನಂತೆಯೇ ಇದ್ದ. ಅನಂತರ ಸ್ವಾಮಿಗಳು ಆ ಮನುಷ್ಯನನ್ನು ಕರೆದುಕೊಂಡು ಹೋದರು.

ಪರಕಾಯ ಪ್ರವೇಶ ಒಂದು ಕಾಲ್ಪನಿಕ ವಿದ್ಯೆಯಲ್ಲ; ಅದು 'ಯೋಗವಿಜ್ಞಾನ' ಬಲ್ಲವರು ಸಾಧಿಸುತ್ತಿದ್ದ ಒಂದು ಚಿಕ್ಕ ತಂತ್ರ ವಿದ್ಯೆ. ತಾಂತ್ರಿಕರ ಮಹಾವಿದ್ಯೆಗಳ ನಡುವೆ ದೊರಕುವ ಒಂದು ಬಗೆಯ ಸಿದ್ಧಿಯಿದು! ಬಹುಜನ ಸಿದ್ಧರ, ಪ್ರಬುದ್ಧರ, ಸಂತರ ಅನುಭವಗಳು ಪರಕಾಯ ಪ್ರವೇಶವನ್ನು ದೃಢೀಕರಿಸುತ್ತವೆ. ಇನ್ನೊಬ್ಬರ ಮನಸ್ಸನ್ನು ಓದುವುದಾಗಲಿ, ದೇಹವನ್ನು ಆತ್ಮವು ಬಿಟ್ಟು ಹೊರಹೋಗುವುದಾಗಲಿ – ಮಹಾವಿದ್ಯೆಗಳ ಬೇರೆ ಬೇರೆ ತುಣುಕುಗಳು ಮಾತ್ರ ಶ್ರೀರಾಮಕೃಷ್ಣ ಪರಮಹಂಸ, ಶ್ರೀ ಅರವಿಂದರು, ಸ್ವಾಮಿ ಯೋಗಾನಂದ ಮುಂತಾದ ಸಂತರು ಬೇರೆಬೇರೆ ಬಗೆಯ 'ಪರಕಾಯ ಪ್ರವೇಶ'ದ ಮಾತುಗಳನ್ನು ಹೇಳಿದ್ದಾರೆ! ಭಾರತೀಯರು ಸಹಜವಾಗಿ ಸಿದ್ಧಿಗಳನ್ನು ಸಾಧಿಸುತ್ತಿದ್ದರು. ಅಂಥದೊಂದು ನಿದರ್ಶನವನ್ನು ದಂಡೀಸ್ವಾಮಿಗಳು ತೋರಿಸಿದರು ಅಷ್ಟೇ! ಇದು ಕಾಲ್ಪನಿಕ ವಿದ್ಯೆಯಲ್ಲ ಎಂಬುದನ್ನು ಜಿಜ್ಞಾಸುಗಳು ತಿಳಿಯಬೇಕು.

■ **ಪುರಂಜೀವಿ**

## ಮಾತೇ ಮುತ್ತು

- ಆದರ್ಶ ಗೃಹಸ್ಥನಾಗುವುದು, ಆದರ್ಶ ಸನ್ಯಾಸಿಯಾಗುವುದಕ್ಕಿಂತ ಕಷ್ಟ.
  —ಸ್ವಾಮಿ ವಿವೇಕಾನಂದ
- ಕ್ಷಮೆಗಿಂತ ಉತ್ಕೃಷ್ಟವಾದ ಆಯುಧ ಇಲ್ಲ.
  —ಗುರುನಾನಕ್
- ಧರ್ಮ ಎನ್ನುವುದು ಲೋಕದ ಹಿತಕ್ಕಾಗಿಯೇ ಹೊರತು, ಲೋಕ ಧರ್ಮದ ಹಿತಕ್ಕಾಗಿ ಅಲ್ಲ.
  —ಡಿ.ವಿ.ಜಿ.
- ಕಷ್ಟಗಳಲ್ಲಿ ಧೈರ್ಯವನ್ನು ತಳೆದವನೇ ದೊಡ್ಡವನು.
  —ಆಚಾರ್ಯ ಸೋಮದೇವ
- ಧ್ಯಾನವು ಅನಂತ ಆನಂದಕ್ಕೆ ಇರುವ ಹೆಬ್ಬಾಗಿಲು.
  —ಸ್ವಾಮಿ ವಿವೇಕಾನಂದ
- ಯಾವುದನ್ನು ಆರಂಭಿಸಬೇಕಾದರೂ ಮೊದಲು ಭಂಡಾರ ಭದ್ರವಾಗಿರಬೇಕು.
  —ಅರ್ಥಶಾಸ್ತ್ರ
- ದೇವರು ನಮಗೆ ಬೇಕಾಗಿರುವುದು ನಮ್ಮ ಭದ್ರತೆಗಾಗಿ.
  —ರಬ್ಬಿ ಲಿಯೋನೆಲ್ ಬ್ಲೂ
- ನಮಗೆ ಸಿಗದೇ ಇರುವುದನ್ನು ದ್ವೇಷಿಸುವುದು ಬಹಳ ಸುಲಭ.
  —ಈಸೋಪ
- ನಿಜವಾದ ಯಶಸ್ಸು ಇರುವುದು ಕಾರ್ಯದಕ್ಷತೆಯಲ್ಲಿ.
  — ರಾಬರ್ಟ್ ಸ್ಟೀವನ್ ಸನ್.
- ಸಿಹಿಯಲ್ಲಿ ಕಹಿ ಇದೆ, ಕೆಟ್ಟದ್ದರಲ್ಲಿ ಒಳ್ಳೆಯದಿದೆ.
  —ಎಮರ್ ಸನ್
- ರಾಜಕೀಯ ನೀತಿ ಬೇರೆ ಬೇರೆ ಎಂದವರು ಎರಡನ್ನೂ ತಿಳಿದುಕೊಳ್ಳಲಾರರು.
  —ಜಿ.ವಿ. ಮಾರ್ಲೆ